ಅಧ್ಯಕ್ಷರು: ನಾನು ಸಲಹೆ ಕೊಡುತ್ತಿದ್ದೇನೆ. ನೀವು impleading application ಹಾಕಿ. ನಮ್ಮ ಜಿಲ್ಲೆಯಿಂದ ಆಗಿದೆ. ನಿಮ್ಮ ಸಲಹೆಯನ್ನು ಕೊಡಿ. ಎಲ್ಲಾ ಸರ್ಕಾರ ಎಂದರೆ ಏನೂ ಆಗುವುದಿಲ್ಲ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ: ಕೆಲವು ಘಟನೆಗಳನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಲಿ. ಪ್ರತಿ ದಿನ ಇದೇ ರೀತಿ ಆಗುತ್ತಿದೆ.

ಅಧ್ಯಕ್ಷರು: ಅದಕ್ಕೆ ನೀವು High Court ನಲ್ಲಿ implead ಆಗಿ

ಶ್ರೀ ಹೆಚ್.ಕೆ. ಕುಮಾರಸ್ವಾಮಿ: ಮೊನ್ನೆ ಹನೂರು ತಾಲ್ಲೂಕಿನಲ್ಲಿ ಇದೇ ರೀತಿ ಆಗಿದೆ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸುವಂತೆ ಒತ್ತಾಯ ಮಾಡಬೇಕು.

ಅಧ್ಯಕ್ಷರು: ಆಯಿತು.

4. ವಿಷಯ: ಬಿಪಿಎಲ್ ಅಥವಾ ಎಪಿಎಲ್ ಕಾರ್ಡ್‌ಗಳನ್ನು ಪಡೆಯುವುದಕ್ಕೆ ಅರ್ಜಿಗಳನ್ನು ಸ್ವೀಕರಿಸುವ ಬಗ್ಗೆ.

ಶ್ರೀ ನೆ.ಲ.ನರೇಂದ್ರಬಾಬು (ಮಹಾಲಕ್ಷ್ಮಿ ಲೇಔಟ್): ಮಾನ್ಯ ಅಧ್ಯಕ್ಷರೆ, ಬಹಳಷ್ಟು ಜನ ಬಡ ಕುಟುಂಬ ವರ್ಗದವರು ಬಿ.ಪಿ.ಎಲ್. ಕಾರ್ಡ್‌ಗಳ ಅರ್ಹತೆಯಿದ್ದರೂ ಸಹ ಪಡೆಯಲಾಗದೆ, ಎ.ಪಿ.ಎಲ್. ಕಾರ್ಡ್‌ಗಳನ್ನು ಕೆಲವರು ಪಡೆದಿರುತ್ತಾರೆ. ಹಿಂದೆ ಇದೇ ಸದನದಲ್ಲಿ ಭರವಸೆ ಕೊಟ್ಟ ಹಾಗೆ ಅರ್ಜಿಗಳನ್ನು ಪಡೆಯುವುದಕ್ಕೆ ಅವಕಾಶ ಮಾಡಿಕೊಡುತ್ತೇವೆಂದು ಹೇಳಿದ್ದು ಇದುವರೆಗೂ ಸಹ ಬಿ.ಪಿ.ಎಲ್ ಆಗಲಿ, ಎ.ಪಿ.ಎಲ್. ಆಗಲಿ ಅರ್ಜಿಗಳನ್ನು ಪಡೆಯುವುದನ್ನು ನಿಲ್ಲಿಸಿದೆ. ಸರ್ಕಾರವೇಕೆ ಅರ್ಜಿ ಪಡೆಯುವುದನ್ನು ನಿಲ್ಲಿಸಿದೆ? ಅರ್ಜಿಗಳನ್ನು ಪಡೆಯುವುದಕ್ಕೆ ಯಾವಾಗ ಅವಕಾಶವನ್ನು ಕಲ್ಪಿಸಿಕೊಡುತ್ತೀರಿ? ಬಡವರಿಗೆ ಬಿಪಿಎಲ್ ಕಾರ್ಡ್‌ಗಳನ್ನು ಯಾವಾಗ ಕಲ್ಪಿಸಿಕೊಡುತ್ತೀರೆಂಬ ಬಗ್ಗೆ ಉತ್ತರ ಕೊಡಬೇಕು.

ಶ್ರೀ ಡಿ.ಎನ್. ಜೀವರಾಜ್ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು): ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಸುಮಾರು 1.36 ಕೋಟಿ ಪಡಿತರ ಚೀಟಿಗಳು ಚಾಲ್ತಿಯಲ್ಲಿವೆ. ಅದರಲ್ಲಿ 88,29,714 ಬಿಪಿಎಲ್ ಕಾರ್ಡ್‌ಗಳು

11,07,545 ಎಪಿಎಲ್ ಕಾರ್ಡ್‌ಗಳಿವೆ. ಸುಮಾರು 1.38 ಕೋಟಿ ಕಾರ್ಡ್‌ಗಳಲ್ಲಿ ಒಂದು ಕೋಟಿಯಷ್ಟು ಕಾರ್ಡ್‌ಗಳು ಬಿಪಿಎಲ್ ಮತ್ತು ಎ.ಎ.ವೈ. ಕಾರ್ಡ್‌ಗಳಿವೆ. ಈ ಪರಿಸ್ಥಿತಿಯಲ್ಲಿ ಬಿಪಿಎಲ್ ಮತ್ತು ಎಪಿಎಲ್ ನಲ್ಲಿ ಸಣ್ಣ ಗೊಂದಲವಾಗಿದೆಯೆಂದು ಮಾನ್ಯ ಶಾಸಕರು ಹೇಳುತ್ತಿದ್ದಾರೆ. 31 ಲಕ್ಷ ಅರ್ಜಿಯನ್ನು online ನಲ್ಲಿ ತೆಗೆದುಕೊಂಡಿದ್ದೇವೆ. ಅದರಲ್ಲಿ double entry ಅಂದರೆ ತಾತ್ಕಾಲಿಕದಲ್ಲಿ ಸಿಗುವುದಿಲ್ಲವೆಂದು ತಿಳಿದುಕೊಂಡು ಹಾಕಿದವರು ಸೇರಿದಂತೆ double entry ತೆಗೆದ ನಂತರ 18.65 ಲಕ್ಷ ಅರ್ಜಿಗಳನ್ನು ವಜಾ ಮಾಡಲಾಗಿದೆ. ಅದರಲ್ಲಿ 8,27,972 ಕಾರ್ಡ್‌ಗಳನ್ನು ಕೊಟ್ಟಿದ್ದೇವೆ. 3.69 ಲಕ್ಷ ಕಾರ್ಡ್‌ಗಳು ರೆಡಿಯಿದೆ, ಕೊಡುತ್ತೇವೆ. ತುಂಬಾ ಜನರಿಗೆ ಅನ್ಯಾಯವಾಗುತ್ತಿದ್ದು, ಬಿಪಿಎಲ್ ಹೊಸ ಕಾರ್ಡ್‌ಗಳಿಗೆ ಅರ್ಜಿಗಳು ಬೇಕೆಂದು ಕೇಳಿದ್ದೀರಿ. ಅದನ್ನು onlineನಲ್ಲಿ register ಮಾಡುವುದಕ್ಕೆ ಮೊದಲು ಒಂದು ಸಾರಿ ಅರ್ಜಿ ಹಾಕಿ ಬರಬೇಕಿತ್ತು. ಹಿಂದೆ ಬಯೋಮೆಟ್ರಿಕ್ ಮತ್ತು ಫೋಟೋ ಕೂಡ ಕೊಡಬೇಕಿತ್ತು. ಈಗ ಎರಡು ಒಂದೇ ಬಾರಿ ಆಗುವಂತೆ software develop ಮಾಡುವುದಕ್ಕೆ ಕೊಟ್ಟಿದ್ದೇವೆ. ತಕ್ಷಣ ಅಂದರೆ ಈ ವಾರದ ಅಂತ್ಯದೊಳಗೆ ಹೊಸ ಅರ್ಜಿಗಳನ್ನು ತೆಗೆದುಕೊಳ್ಳುತ್ತೇವೆ. ಮತ್ತು ಯಾವುದಾದರೂ ಬಿಪಿಎಲ್ ಕಾರ್ಡ್ ಎಪಿಎಲ್ ಆಗಿ ತಪ್ಪಾಗಿದ್ದರೆ ಅದನ್ನು ತಿದ್ದುಪಡಿ ಮಾಡಿಕೊಡುವುದಕ್ಕೆ ಅದರ ಜೊತೆ ಅವಕಾಶವನ್ನು ಮಾಡಿಕೊಡುತ್ತಿದ್ದೆವೆ. ಮತ್ತು temporary ಕಾರ್ಡ್‌ಗಳನ್ನು permanent ಕಾರ್ಡ್‌ಗಳನ್ನಾಗಿ ಮಾಡುವುದರಲ್ಲಿ ಸರ್ಕಾರ ಯಶಸ್ವಿಯಾಗಿದೆಯೆನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ನೆ.ಲ.ನರೇಂದ್ರಬಾಬು: ಸಚಿವರಿಗೆ ಧನ್ಯವಾದವನ್ನು ಹೇಳುತ್ತೇನೆ. ದಯಮಾಡಿ ಈ ವಾರದಲ್ಲಿ ಶುರು ಮಾಡಿ.

ಶ್ರೀ ಡಿ.ಎನ್. ಜೀವರಾಜ್: ಮಾಡುತ್ತೇವೆಂದು ಈಗಾಗಲೇ ಹೇಳಿದ್ದೇನೆ.